**C.C.No.110/2016**
**PW-4**

**ದಿಃ 18.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಲ್ ಎಮ್ ಎಮ್ ವಕೀಲರಿಂದ ಃ**

ದೊಡ್ಡಬಳ್ಳಾಪುರದಿಂದ ದಾಬಾಸಪೇಟೆ ಕಡೆಗೆ ಹೋಗುವ ರಸ್ತೆಯು ಏರುಮುಖವಾಗಿದೆ ಎಂದರೆ ಸರಿ. 2015 ರಲ್ಲಿ ರಸ್ತೆಯು 12 ಅಡಿ ರಸ್ತೆಯಾಗಿದ್ದು , ಏಕಮುಖ ಸಂಚಾರಿವಿತ್ತು ಎಂದರೆ ಸರಿ. ಸಣ್ಣ ರಸ್ತೆಯಲ್ಲಿಯೆ ಎರಡು ದಿಕ್ಕಿನ ಗಾಡಿಗಳು ಎದುರು-ಬಿದರು ಓಡಾಡಬೇಕಿತ್ತು ಎಂದರೆ ಸರಿ. ಮೃತ ಮಕ್ಕಳು ನನಗೆ ಪರಿಚಿತರು. ಘಟನೆಯು ದಿನ ಭಾನುವಾರವಾಗಿತ್ತು ಎಂದರೆ ಸರಿ. ಮೃತ ಮಕ್ಕಳು ತರಬನಹಳ್ಳಿಯ ಊರಿನವರು. ತರಬನಹಳ್ಳಿಯಿಂದ ಮುಖ್ಯರಸ್ತೆಗೆ ಬರುವಾಗ ಎದುರಿಗೆ ಬರುವ ವಾಹನಗಳು ಕಂಡುಬರುವುದಿಲ್ಲ ಎಂದರೆ ಸರಿ. ತರಬನಹಳ್ಳಿಯಿಂದ ಮೃತ ಹುಡಗರು ಸೈಕಲ್ ನ್ನು ಏಕಾ-ಏಕಿ ಮುಖ್ಯ ರಸ್ತೆಗೆ ಚಲಾಯಿಸಿಕೊಂಡು ಬಂದರು ಎಂದರೆ ಸರಿಯಲ್ಲ. ನನ್ನ ಅಂಗಡಿಯು ದಾಬಾಸಪೇಟೆ ಕಡೆಗೆ ತರಬನಹಳ್ಳಿ ರಸ್ತೆಯಿಂದ ಸುಮಾರು 30 ರಿಂದ 40 ಅಡಿ ರಸ್ತೆಯಲ್ಲಿದೆ. ನನ್ನ ಅಂಗಡಿಯು ದಕ್ಷಿಣ ಭಾಗಕ್ಕೆ ಬರುತ್ತದೆ. ನನ್ನ ಅಂಗಡಿಯ ಬಾಗಿಲು ಉತ್ತರ ಭಾಗಕ್ಕ ಬರುತ್ತದೆ. ನಾನು ನನ್ನ ಅಂಗಡಿಯಲ್ಲಿ ಕುಳಿತ್ತಿದ್ದರೆ ತರಬನಹಳ್ಳಿ ರಸ್ತೆಯಲ್ಲಿ ಓಡಾಡುವ ವಾಹನಗಳು ಮುಖ್ಯ ರಸ್ತೆಗೆ ಹೇಗೆ ಬರುತ್ತವೆ ಎಂದು ಕಾಣುವುದಿಲ್ಲವೆಂದರೆ ಸರಿ. ಘಟನೆಯು ಆರೋಪಿತನ ಲಾರಿಯಿಂದಲೇ ಆಗಿದೆ ಎಂದು ಕಂಡುಬಂದಿಲ್ಲ ಆದರೆ ಅಪಘಾತವಾಗಿದ್ದು ಅಲ್ಲಿ ತಕ್ಷಣವೇ ಲಾರಿಯು ಮುಂದಕ್ಕೆ ಹೋಗಿದ್ದನು ನೋಡಿರುತ್ತೇನೆ. ಲಾರಿಯು ಹೊರಟು ಹೊಗದೆ ಅಲ್ಲಿಯೆ ನಿಂತ್ತಿತ್ತು ಎಂದರೆ ಸರಿ. ಅಪಘಾತವು ಆರೋಪಿಯು ತನ್ನ ಅತಿವೇಗ ಮತ್ತು ಅಜಾಗರೂಕ ಚಾಲನೆಯಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ಮಕ್ಕಳು ತಾವು ಚಾಲಾಯಿಸುತ್ತಿದ್ದ ಸೈಕಲ್ ನ್ನು ಅಕ್ಕ-ಪಕ್ಕ ನೋಡದೆ ಏಕಾ-ಏಕಿ ಮುಖ್ಯರಸ್ತೆಗೆ ನುಗ್ಗಿದ್ದರಿಂದ ಸಂಭವಿಸಿರುತ್ತದೆಂದರೆ ಸರಿಯಲ್ಲ. ಮೃತ ಮಕ್ಕಳು ನನಗೆ ಪರಿಚಿತರಿರುವುದರಿಂದ ಅವರಿಗೆ ಪರಿಹಾರ ಸಿಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲಃ**

**( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು)**

**ಓ ಹೇ ಕೇ ಸ ಇದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**